Doc 14c
T-P-2

Regd No BG 155 8-9-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ನಾಯಕತ್ವ ಕುರಿತು ಪ್ರಧಾನಿ ಕುತೂಹಲ

ಆಹಾರ ಉತ್ಪಾದನೆ

ನವದೆಹಲಿ— ಈ ವರ್ಷ ಆಹಾರ ಉತ್ಪಾದನೆ 101 ಮಿಲಿಯ ಟ್ ಆಗುವದೆಂದು ಹೇಳಲಾಗುತ್ತಿದೆ.

★

ಭದ್ರಾಚಲ ನೀರಿನಲ್ಲಿ ನಿಂತಿದೆ

ಹೈದರಾಬಾದು— ವಿಸ್ತೀರ್ಣ ಪ್ರವಾಹದಿಂದ ಭದ್ರಾಚಲ ನೀರಿನಿಂದ ಸುತ್ತಲ್ಪಟ್ಟಿದೆ

"ಸತ್ಯವಾದಿ" ಯ ಸ್ವರ್ಣೋತ್ಸವ

ಭಾನುವಾರ 28-9-1969

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ತತ್ಕಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಜಪುರಂ, ಮೈಸೂರು 4

ಮೂಲಭೂತ ಹಕ್ಕು

ಮೈಸೂರು— ಒಂದು ತಿದ್ದುಪಡಿ ಮೂಲಕ ಪಾರ್ಲಿಮೆಂಟಿಗೆ ಮೂಲಭೂತ ಹಕ್ಕು ತೆಗೆದುಹಾಕುವ ಅಧಿಕಾರ ಕೊಡುವ ಪ್ರಯತ್ನವು, ಸುಪ್ರೀಂ ಕೋರ್ಟಿನ ಗೋಲಕನಾಥ್ ಮೊಖದ್ದಮೆ ತೀರ್ಪಿನ ದೃಷ್ಟಿಯಲ್ಲಿ ನಿಷ್ಫಲವಾಗುವುದೆಂದು ಮಾಜಿ ಶ್ರೀಮನ್ಯಾಯಾಧೀಶ ಶ್ರೀ ಕೆ ಸುಬ್ಬರಾಯರು ಲಾ ಕಾಲೇಜು ವಿದ್ಯಾರ್ಥಿಗಳಿಗೆ ಮಾಡಿದ ಭಾಷಣದಲ್ಲಿ ಹೇಳಿದರು – ಮೂಲಭೂತ ಹಕ್ಕು ತೆಗೆದುಹಾಕುವ ಯಾವ ಶಾಸನವೂ ಅಧಿಕಾರದ ಮಿತಿಮೀರಿದ್ದಾದ್ದರಿಂದ ನಿಷ್ಫಲವು ಎಂದರು.

☆

ಪಾಕಿಸ್ತಾನ ರಕ್ಷಣಾ ದಿನ

ಕರಾಚಿ— 1965 ರಲ್ಲಿ ಭಾರತದೊಡನೆಯ ಘರ್ಷಣೆಯ ನಾಲ್ಕನೇ ವರ್ಷವನ್ನು 'ಪಾಕಿಸ್ತಾನ ರಕ್ಷಣಾ ದಿನ'ವಾಗಿ ಶನಿವಾರ ಆಚರಿಸಲಾಯಿತು.

★

ಎಸ್ಸೆಸ್ಪಿ ಇಚ್ಛೆ

ತಿರುವನಂತಪುರಂ— ಎಲ್ಲ ಮಂತ್ರಿಗಳ ಮೇಲಿನ ಎಲ್ಲಾ ಆರೋಪಗಳ ಬಗ್ಗೆ ತನಿಖೆ ನಡೆಯಬೇಕೆಂದು ಎಸ್ಸೆಸ್ಪಿ ಈಗ ಇಚ್ಛಿಸಿದೆ.

★

ಹಿಮಾಲಯದಲ್ಲೂ ಒಂದು ಕೇಂದ್ರ

ನವದೆಹಲಿ— ಬೆಂಗಳೂರಿನ ವಿದ್ಯುಚ್ಛಕ್ತಿ ಸಂಶೋಧನಾ ಸಂಸ್ಥೆಯು ಹಿಮಾಲಯಾ ಭಾಗದಲ್ಲಿ ಸಂಶೋಧನೆಗೆ ಒಂದು ಉಪಕೇಂದ್ರ ಸ್ಥಾಪಿಸಲಿದೆ

★

ಶ್ರೀಮನ್ಮಹಾರಾಜರು ಗೌರ್ನರ್ ಆಗಲಿ

ಬೆಂಗಳೂರು— ದೇವನಹಳ್ಳಿ ತಾಲ್ಲೂಕು ವಿಜಯಪುರದ ಪೌರಸಭೆಯು, ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರು ಮೈಸೂರಿನ ರಾಜ್ಯಪಾಲರಾಗಲಿ ಎಂದು ನಿರ್ಣಯ ಮಾಡಿದೆ.

ದೇಸಾಯರ ನುಡಿ

ಅಹಮದಾಬಾದು— ಕಾಂಗ್ರೆಸ್ ಪಾರ್ಟಿಯಲ್ಲಿ ಹೆಚ್ಚುತ್ತಿರುವ ಆತಿಶ್ತು ಇಂದಿರಾ ಗಾಂಧಿಯವರ ಸರಕಾರವನ್ನು ಕಟ್ಟಿಕಡೆಗೆ ಉರುಳಿಸಬಹುದೆಂದೂ ಮಾಜಿ ಉಪ ಪ್ರಧಾನಿ ಮೊರಾರ್ಜಿ ದೇಸಾಯ ಹೇಳಿದರು

○

ಪ್ರಧಾನಿಯರ ನುಡಿ

ಲಕ್ನೋ— ತಾವು ಪ್ರಧಾನಿಯಾಗಿರುವ ವಿಷಯದಲ್ಲಿ ತಮಗೇನೂ ಚಿಂತೆಯಿಲ್ಲವೆಂದೂ, ಆದರೆ ದೇಶವು ಸರಿಯಾದ ನಾಯಕತ್ವ ಪಡೆಯುವ ವಿಷಯ ತಮಗೆ ಕುತೂಹಲವೆಂದೂ ಪ್ರಧಾನಿ ಇಂದಿರಾರವರು ಹೇಳಿದರು – ಕಾರ್ಪುರದಿಂದ ಲಕ್ನೋಗೆ ಹೋಗುವಾಗ ಒನ್ನಾವೋದೇಲಿನಲ್ಲಿ ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಪ್ರಧಾನಿ ಇಂದಿರಾರವರು, ಶತ್ರುಗಳು ಅಭೇದ್ಯರಾಗಿದ್ದಾರೆ, ಆದರೆ ಸವಾಲು ಸಾಮಾನ್ಯವಾದುದಾಗಿದೆ ಎಂದು ಹೇಳಿದರು : ತಾವು ಜನತೆಗೆ ಆತಿತೋರಿಸುವ ವಾಗ್ದಾನ ಮಾಡುವುದಕ್ಕೆ ಹೊರಟಿಲ್ಲವೆಂದೂ ಆದರೆ ಆವರು ತಮ್ಮ ಜೊತೆ ಮುನ್ನುಗ್ಗುತ್ತಾ ದೇಶದ ಹಿತಕ್ಕಾಗಿ ತ್ಯಾಗಮಾಡಲು ಸಿದ್ಧರಾಗಬೇಕೆಂದು ಹೇಳಿದರು.

★

ಕಳ್ಳಭಟ್ಟ ಪತ್ತೆ

ಹಾಸನ— ಬೇಲೂರು ತಾಲ್ಲೂಕಿನ ಕೆಲವು ಕಡೆ ಅಬ್ಕಾರಿ-ಇನ್ಸ್ಪೆಕ್ಟರು ನಸಿದ ಧಾಳಿಯಲ್ಲಿ 5500 ಲೀಟರು ಕಳ್ಳಭಟ್ಟಿ ಮತ್ತು 2500 ಕೊಳೆ ವಶಪಡಿಸಿಕೊಂಡು 12 ಮಂದಿಯನ್ನು ಬಂಧಿಸಿದರು.

ದಿವ್ಯವಾಣಿ

ತನ್ನ ಶತ್ರುಗಳ ಒಲವನ್ನು ನಿಗ್ರಹಿಸಲು ಸಕಾಲದಲ್ಲಿ ಕಾರ್ಯ ಕೈಗೊಳ್ಳದವರು ಹಾಳುಮಾಡಲ್ಪಡುವರು.

— ತಿರುವೆಲುವಾರ್

ಮಕ್ಕಳ ಅಪಹರಣ ಗೊಂದಲ

ಕಲ್ಕತ್ತಾ— ಕಲ್ಕತ್ತಾ ಮತ್ತು ಸುತ್ತಮುತ್ತ ಮಕ್ಕಳನ್ನು ಎತ್ತಿಕೊಂಡು ಹೋಗುತ್ತಿರುವರೆಂಬ ಕಳವಳ ಹರಡಿ, ಜನರು ಇಬ್ಬರನ್ನು ಕೊಂದುಹಾಕಿ 10–12 ಮಂದಿಯನ್ನು ಆತಿಯಾಗಿ ಹೊಡೆದುಬಡಿದು ಮಾಡಿದರು – ಏನು ಅಪಹರಣವಿಲ್ಲವೆಂದು ಪೋಲೀಸರು ಹೇಳುತ್ತಾರೆ.

●

ಶ್ರೀ ನಿಜಲಿಂಗಪ್ಪನವರ ಪತ್ರಿಕಾಗೋಷ್ಠಿ

ನವದೆಹಲಿ— ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಪತ್ರಿಕೆಯವರನ್ನು ಪ್ರತಿ ಸಂಜೆ ಕಾಣುತ್ತಿದ್ದ ಹಳೇಪದ್ಧತಿಯನ್ನು ಬದಲಾಯಿಸಿರುವಂತೆಯೂ, ಅವರು ಪತ್ರಿಕೆಯವರನ್ನು ವಾರಕೊಂದು ಸಾರಿ ಕಾಣಲು ನಿರ್ಧರಿಸಿರುವರೆಂದೂ ಹೇಳಲಾಗಿದೆ.

★

ರಕ್ಷಣೆಗೆ ಅವಕಾಶವಿಲ್ಲ

ನವದೆಹಲಿ— ಆಂಧ್ರಪ್ರದೇಶ ಸರಕಾರದಲ್ಲಿರುವ ತೆಲಂಗಾಣಾ ಜನರಿಗೆ ರಕ್ಷಣೆಗಳನ್ನು ಮುಂದುವರಿಸುವ ವಿಷಯದಲ್ಲಿ ಯಾವ ಶಾಸನ ಅಥವಾ ರಾಜ್ಯಾಂಗ ಮಾರ್ಗವಿಲ್ಲವೆಂದು, ಈ ವಿಷಯ ಪರಿಶೀಲನೆಗೆ ನೇಮಿಸಲಾಗಿದ್ದ ಸಮಿತಿ ಅಭಿಪ್ರಾಯಪಟ್ಟಿದೆ.

★

ನಟನಿಗೆ ಶಿಕ್ಷೆ

ಬೊಂಬಾಯಿ— 61 62 ರಲ್ಲಿ ರೂ. 160000 ಆದಾಯವನ್ನು ಮರೆಮಾಚಿದ ಚಲಚ್ಚಿತ್ರ ನಟ ಕಿಶೋರಕುಮಾರ್‌ಗೆ 2 ತಿಂಗಳ ಸಜ ವಿಧಿಸಲ್ಪಟ್ಟು, ಹೈಕೋರ್ಟ್ ಅಪೀಲು ಹೋಗಲಿರುವುದರಿಂದ ಜಾಮೀನ್ ಮೇಲೆ ಬಿಡಲ್ಪಟ್ಟನು.

★

ಯೂರೋಪಿಗೆ ಹಣ್ಣು ರಫ್ತು

ಮದರಾಸು— ಈಚಿನ ಕೆಲವು ವಾರ್ತೆಗಳಲ್ಲಿ ಯೂರೋಪಿಗೆ ಇಲ್ಲಿಯ ಹಣ್ಣು ತರಕಾರಿ, ಹೂವುಗಳನ್ನು ಸ್ಟೇಟ್ ಟ್ರೇಡಿಂಗ್ ಕಂಪೆನಿ ರಫ್ತು ಮಾಡುತ್ತಿದೆ : ಆಗಸ್ಟ್ 20 ರಂದು 20 ಟನ್ ಸೇಬು ಕಳಿಸಲಾಯಿತೆಂದು ವರದಿಯಾಗಿದೆ.

ಚುನಾವಣೆ ಪದ್ಧತಿ

ಅಮೃತಸರ— ಈಗಿನ ಚುನಾವಣಾ ರೀತಿಯು ಕೊರತೆಯುಳ್ಳ ಮತ್ತು ಜನತೆಗೆ ಅಪಾಯಕಾರಿಯಾಗಿದೆಯೆಂದು ಶ್ರೀ ಜಯಪ್ರಕಾಶನಾರಾಯಣರು ಹೇಳಿದರು.

ಸೇಬಿನಹಣ್ಣಿನ ಆಕರ್ಷಕ ಪ್ರದರ್ಶನ

ನವದೆಹಲಿ— ಕೇಂದ್ರ ಸರ್ಕಾರದ ಆಹಾರ ಮಂತ್ರಿಶಾಖೆಯ ವಿಸ್ತೀರ್ಣ ನಿರ್ದೇಶಾಲಯದವರು ಇದೇ ಸೆಪ್ಟಂಬರು 20 ಮತ್ತು 21 ರಂದು ಸಿಮ್ಲಾದಲ್ಲಿ ಅಖಿಲ ಭಾರತ ಸೇಬುಹಣ್ಣಿನ ಪ್ರದರ್ಶನವನ್ನು ಏರ್ಪಡಿಸಿದ್ದಾರೆ.

ಸಂಗೀತಹಾಡುವ ಕೊಳ

ಸಿಲೋನಿನ ಬಟಕೋಲಾದಲ್ಲಿ ಒಂದು ಹಾಡುವ ಸರೋವರವಿದೆ. ಶಾಂತಯುತ ರಾತ್ರಿಗಳಲ್ಲಿ, ಅದರಲ್ಲೂ ಪೂರ್ಣಿಮಾ ಕಾಲದಲ್ಲಿ ಈ ಉಪ್ಪು ನೀರಿನ ಸರೋವರದಿಂದ ಸ್ಪಷ್ಟವಾಗಿ ಸಂಗೀತ ಕೇಳಿಬರುತ್ತದೆ. ಈ ವಿಚಿತ್ರಕ್ಕೆ ತೃಪ್ತಿಕರವಾದ ವಿವರಣೆ ಕಂಡುಬಂದಿಲ್ಲವಾದರೂ, ಸರೋವರದಲ್ಲಿರುವ ಒಂದು ರೀತಿಯ ಚಿಪ್ಪಿನ ಮಾನು ಇದಕ್ಕೆ ಕಾರಣವೆಂದು ನಂಬಲಾಗಿದೆ.

★

ಸಾದರ ಸ್ವೀಕಾರ

ನಮ್ಮ ಪತ್ರಾಸ (ಲೇಖಕರು : ಶ್ರೀ ಕೊಟ್ರೇಗೌಡರು, ಬಿ.ಕಾಂ, ಬಿ.ಎಲ್ ; ಶ್ರೀ ಕೊಟ್ಟೂರೇಶ್ವರ ಪ್ರಕಾಶನ, ಹಗರಿಬೊಮ್ಮನಹಳ್ಳಿ ಬಳ್ಳಾರಿ ಜಿಲ್ಲೆ ; ಬೆಲೆ 95 ಪೈಸೆ) ಲೇಖಕರು ಭಾರತಾದ್ಯಂತ ನಡೆಸಿದ ಪ್ರವಾಸದಲ್ಲಿ ಮುಖ್ಯ ಸ್ಥಳಗಳಲ್ಲಿ ತಾವು ಕಂಡು ಕೇಳಿದ ವಿಷಯಗಳನ್ನು ಸರಳವಾಗಿ ವಿವರಿಸಿದ್ದಾರೆ.

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪೋಷಣೆಯಲ್ಲಿ ಕಾರ್ಯಗಳಲ್ಲಿ ಹೆಚ್ಚಿನ ಭಾಗವಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

ವುಡ್‌ಲಾಂಡ್ಸ್ ತಾ. 5-9-69 ರಿಂದ ಅಮೋಘ ಪ್ರಾರಂಭ

— ಅತ್ಯಾಕರ್ಷಣೀಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್ ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೇರಾ 5-9-69 ರಿಂದ

.... ಚಿತ್ತಾಕರ್ಷಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಮಹಲ್

ಪಾತ್ರ— ದೇವಾನಂದ್, ಆಶಾ ಪರಾಖ್, ಅಭಿ ಭಟ್ಟಾಚಾರ್ಯ ಡೇವಿಡ್, ಅಜಿತ್, ಸುಧಿರ್

ದಿಗ್ದರ್ಶನ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜಿ ಆನಂದ್‌ಜಿ

ದಿನಕ್ಕೆ 3 ಆಟಗಳು

Golden Jubilee of 'Satyavadi'
Sunday 28-9-1969

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 1.

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 6